## ಶಿಕ್ಷಣ ವ್ಯವಸ್ಥೆಯಲ್ಲಿ ಸಂವಾದ ಸಾಂಸ್ಥಿಕ ಹೊಂದಿಕೆಗಳು ಇರುವಂತೆ ನೋಡಿಕೊಳ್ಳುವುದು


-ಅನಂತ ಗಂಗೋಲ ಮತ್ತು ಜಗಮೋಹನ ಸಿಂಗ್ ಕಥೈಟ್

ಶಿಕ್ಷಣವು ಒಂದು ಪ್ರಮುಖ, ಆಸಕ್ತಿದಾಯಕ ಆದರೆ ಸಂಕೀರ್ಣವಾದ ಪ್ರಕ್ರಿಯೆ. ಇದು ಸಂಕೀರ್ಣವಾದದ್ದು ಏಕೆಂದರೆ, ಇದು ತನ್ನ ಗುಣ ಸ್ವರೂಪದಲ್ಲಿ ಸಾಮಾಜಿಕವಾದದ್ದಾಗಿದೆ. ಸಮಾಜದಲ್ಲಿನ ಭೌಗೋಳಿಕ, ಸಾಂಸ್ಕೃತಿಕ ಮತ್ತು ಇನ್ನಿತರ ವೈವಿಧ್ಯಗಳು ಈ ಸಂಕೀರ್ಣತೆಯ ಪ್ರಮುಖ ಮೂಲ. ಸಂಕೀರ್ಣತೆಯ ಎರಡನೆಯ ಮೂಲವೆಂದರೆ, ಸದಾ ಬದಲಾಗುತ್ತಲೇ ಇರುವ ವಿಷಯ ಕ್ಷೇತ್ರ ಹಾಗೂ ಭೋದನಾ ಕ್ರಮ. ಈ ಸಂಕೀರ್ಣ ಪ್ರಕ್ರಿಯೆಗೆ ಕಾರಣವಾಗುವ ಮತ್ತೊಂದು ಕ್ಷೇತ್ರವೆಂದರೆ, ವಿಧವಿಧದ ಭಾಗೀದಾರರು. ಉದಾಹರಣೆಗೆ, ಬಹು ಆಯಾಮಗಳಲ್ಲಿ ಸಂಭವಿಸುತ್ತಿರುವ ಬದಲಾವಣೆಗಳು ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಸಂಬಂದಿಸಿದಂತೆ ನಾವು ಕಾಣುವ ವೈವಿಧ್ಯ.

ಗಾತ್ರದಲ್ಲಿ ದೊಡ್ಡದಾದ ಹಾಗೂ ಸಾಂಸ್ಕೃತಿಕವಾಗಿ ವೈವಿಧ್ಯಮಯವಾಗಿರುವ ಭಾರತದಂತಹ ದೇಶದಲ್ಲಿ ಸಾರ್ವಜನಿಕ ಶಿಕ್ಷಣದ ಸಂದರ್ಭವು ಸಂಕೀರ್ಣತೆಯ ಸಮಸ್ಯೆ ಹಾಗೂ ವ್ಯಾಪ್ತಿಯನ್ನು ಸಂಪೂರ್ಣವಾಗಿ ಬೇರೆಯದೇ ಮಟ್ಟಕ್ಕೆ ತೆಗೆದುಕೊಂಡೊಯ್ಯುತ್ತದೆ. ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟವನ್ನು ಒದಗಿಸಲಾಗುವ ಮಕ್ಕಳ ಸಂಖ್ಯೆಯನ್ನು ನೋಡಿದರೆ ಸಾಕು, ಅದರ ಒಂದು ಮಿಂಚುನೋಟ ಸಿಗುತ್ತದೆ. ಈ ಸಂಖ್ಯೆಯು ಹಲವು ದೇಶಗಳ ಒಟ್ಟಾರೆ ಜನಸಂಖ್ಯೆಗಿಂತ ಹೆಚ್ಚು ಇದೆ. ಭಾರತದಲ್ಲಿನ ಒಂದೇ ಒಂದು ರಾಜ್ಯವನ್ನು ತೆಗೆದುಕೊಂಡರೂ ಸಾಕು, ಅಲ್ಲಿರುವ ಆಹಾರ ಪದ್ಧತಿಯಲ್ಲಿನ ವೈವಿಧ್ಯತೆ ಎಷ್ಟಿದೆಯೆಂದರೆ, ಬಿಸಿಯೂಟಕ್ಕೆ ಪದಾರ್ಥಗಳ ಪಟ್ಟಿಯನ್ನು ತಯಾರಿಸುವುದೇ ಒಂದು ಸವಾಲು.

ಕಾಲದಿಂದ ಕಾಲಕ್ಕೆ ಬದಲಾಗುತ್ತಿರುವ ಶಿಕ್ಷಣದ ಗುಣಲಕ್ಷಣಗಳಿಂದಾಗಿ ಹೊಸ ಸಂಸ್ಥೆಗಳು ಸ್ಥಾಪಿಸಲ್ಪಡುತ್ತಿವೆ. ಇವು ಬೇರೆಯದೇ ತರಹದ ನಿರೀಕ್ಷೆಗಳನ್ನು ಹೊಂದಿರುವ ಹೊಸ ಭಾಗೀದಾರರನ್ನು ಹುಟ್ಟು ಹಾಕುತ್ತವೆ. ಶಿಕ್ಷಣದ ಸಾರ್ವತ್ರೀಕರಣವು ಶಿಕ್ಷಣ ಕ್ಷೇತ್ರದಲ್ಲಿ ನಾವು ನೋಡಿದ ಅತ್ಯಂತ ದೊಡ್ಡ ಹಾಗೂ ಮಹತ್ವದ ಬದಲಾವಣೆ. ಇದನ್ನು ಕೇವಲ ಶಿಕ್ಷಣದ ವಿಸ್ತರಣೆ ಎಂದಷ್ಟೇ ಪರಿಗಣಿಸಲು ಸಾಧ್ಯವಿಲ್ಲ. ಅದು ತನ್ನೊಂದಿಗೆ ಹೊಸಹೊಸ ಸಮಸ್ಯೆಗಳನ್ನು, ಕಾಳಜಿಗಳನ್ನು ತಂದಿದೆ ಹಾಗೂ ಬೇರೆಯದೇ ತರಹದ ಮೌಲ್ಯ ವ್ಯವಸ್ಥೆ ಮತ್ತು ಸಾಮಾಜಿಕ ಅರಿವನ್ನು ಬೇಡುತ್ತದೆ. ಸಾರ್ವತ್ರೀಕರಣಕ್ಕೆ ಬಳಸಿದ ಧ್ಯೇಯ ಸಾಧನೆ ವಿಧಾನದಲ್ಲಿ (ಮಿಷನ್ ಮೋಡ್ ಅಪ್ರೋಚ್) ಹೊಸಹೊಸ ಸಂಸ್ಥೆಗಳು, ನಿರ್ಮಾಣಗಳು ಅಸ್ತಿತ್ವಕ್ಕೆ ಬಂದಿವೆ. ಈ ಅರ್ಥದಲ್ಲಿ ಶಿಕ್ಷಣದ ವಿಕೇಂದ್ರೀಕರಣವು ಸಮಾದಾಯದ ಹಾಗೂ ಅದಕ್ಕೂ ಮಿಗಿಲಾದ ನಾಗರಿಕ ಸಮಾಜದ ಪಾಲ್ಗೊಳ್ಳುವಿಕೆಯನ್ನು ಬೇಡುತ್ತದೆ. ಅದು ವ್ಯವಸ್ಥೆಯ ವಿವಿಧ ಸ್ವರೂಪಗಳಲ್ಲಿ ಹಾಗೂ ಮಟ್ಟಗಳಲ್ಲಿ ಆಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ.

ಸಾರ್ವತ್ರೀಕರಣದ ಉದ್ದೇಶವು ಎದುರಿಸುತ್ತಿರುವ ಅತ್ಯಂತ ದೊಡ್ಡ ಸವಾಲೆಂದರೆ, ಸಂವಾದದ ಕೊರತೆ ಹಾಗೂ ವಿವಿಧ ಪಾಲುದಾರರು, ಸಂಸ್ಥೆಗಳ ನಡುವೆ ಪರಸ್ಪರ ಹೊಂದಿಕೆ (alignment) ಇಲ್ಲದಿರುವುದು. ಒಂದೋ ಯಾವುದೇ ತರಹದ ಸಂವಾದವೂ ಇಲ್ಲವೇ ಇಲ್ಲ ಅಥವಾ ಇದ್ದರೂ ಇದು ಬಿಡಿಯಾಗಿ ಸಂಸ್ಥೆಗಳ ಒಳಗೇ ಸೀಮಿತವಾಗಿದೆ. ಬಲಗೈ ಏನುಮಾಡುತ್ತಿದೆ ಎಂಬುದು ಎಡಗೈಗೆ ತಿಳಿದಿರಲೇಬೇಕೆನ್ನುವುದನ್ನು ಖಚಿತಗೊಳಿಸಲು ಯಾವುದೇ ವಿಧಾನ, ವ್ಯವಸ್ಥೆಯೂ ಇಲ್ಲ. ಕೆಳಗಿನ ರೇಖಾಚಿತ್ರವು ವಿವಿಧ ಸಂಸ್ಥೆಗಳು ಮತ್ತು ಅವುಗಳ ನಡುವಿನ ಸಂಬಂಧವನ್ನು ತೋರಿಸುತ್ತದೆ. ಇವುಗಳಲ್ಲಿನ ಹಲವಾರು ಸಂಸ್ಥೆಗಳು 'ಶೈಕ್ಷಣಿಕ ಸಾಧ್ಯಕಾರಕರ'(academic enablers) ಪಾತ್ರಕ್ಕಿಂತಲೂ ' ಉಸ್ತುವಾರಿ' ಪಾತ್ರವನ್ನು ವಹಿಸಿಕೊಂಡಿವೆ.




CEO – Chief Education Officer; DEO (B) – District Education Officer, Elementary Education; DEO (M) – District Education Officer, Secondary; BEO – Block Education Officer; BRC – Block Resource Centre; CRC – Cluster Resource Centre

CEO- ಮುಖ್ಯಶಿಕ್ಷಣಾಧಿಕಾರಿ

DEO(B)- ಜಿಲ್ಲಾಶಿಕ್ಷಣಾಧಿಕಾರಿ, ಪ್ರಾಥಮಿಕಶಿಕ್ಷಣ

DEO(M)-ಜಿಲ್ಲಾಶಿಕ್ಷಣಾಧಿಕಾರಿ, ಮಾಧ್ಯಮಿಕ

BEO-ಕ್ಷೇತ್ರ (ಬ್ಲಾಕ್)ಶಿಕ್ಷಣಾಧಿಕಾರಿ

BRC- ಕ್ಷೇತ್ರ (ಬ್ಲಾಕ್)ಸಂಪನ್ಮೂಲಕೇಂದ್ರ

CRC-ಸಮೂಹ (ಕ್ಲಸ್ಟರ್)ಸಂಪನ್ಮೂಲಕೇಂದ್ರ


ಶಿಕ್ಷಣದಲ್ಲಿ, ಸ್ವಯಂಪ್ರೇರಣೆ, ಸ್ವಯಂ ಉಪಕ್ರಮ ಹಾಗೂ ಸ್ವಯಂಸೇವಾ ಮನೋಭಾವನೆಗಳನ್ನು ಹೊಂದಿರುವ ಪ್ರಯತ್ನಗಳಷ್ಟೇ ಯಶಸ್ವಿಯಾಗುತ್ತವೆ ಹಾಗೂ ಸುಸ್ಥಿರವಾಗಿರುತ್ತವೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಅತ್ಯಂತ ಮುಖ್ಯ. ಆಜ್ಞೆಗಳನ್ನು ಅನುಸರಿಸುವುದು ಕೇವಲ ಯಾಂತ್ರಿಕ ಅನುಸರಣೆಯಾಗುತ್ತದೆ ಅಷ್ಟೇ. ಅದಕ್ಕೆ ಜೀವವೂ ಇರದು, ಸುಸ್ಥಿರತೆಯೂ ಇರದು.

ಶಿಕ್ಷಣ ಸಂಸ್ಥೆಗಳ ನಡುವೆ ಸಂವಹನ, ಸಹಕಾರ ಹಾಗೂ ಹೊಂದಿಕೆ (alignment)ಗಳ ಕೊರತೆಯಿದೆ ಎನ್ನುವುದನ್ನು ನಾವು ಗಮನಿಸಿದ್ದೇವೆ, ಪ್ರಸ್ತುತ ಸನ್ನಿವೇಶದ ಸಾರವನ್ನು ಸೂಕ್ಷ್ಮವಾಗಿ ಗ್ರಹಿಸಬಲ್ಲ, ಮಕ್ಕಳ ಅಗತ್ಯಗಳ ಕಡೆಗೆ ತಮ್ಮ ಗಮನವನ್ನು ಹರಿಸಬಲ್ಲ ಸಂವೇದನಶೀಲ ಜನರು ನಮಗೆ ಸಿಗುತ್ತಾರೆ. ಅವರು ಏನಾದರೂ ಒಳ್ಳೆಯದನ್ನು ಮಾಡಲು ಸಾಧ್ಯವಾಗಿದ್ದಿದ್ದರೆ ಅದು ಅವರ ವ್ಯಕ್ತಿಗತ ಒಳ್ಳೆಯತನದಿಂದಷ್ಟೇ ಹೊರತು ಸಾಂಸ್ಥಿಕ ಪ್ರಯತ್ನ ಹಾಗೂ ಫಲದಿಂದಲ್ಲ. ಮೂಲತಃ ಪೂರಕ ಪಾತ್ರವನ್ನು ನಿರ್ವಹಿಸಬೇಕೆಂಬ ವಿಚಾರದಿಂದ ಕೆಲವು ಸಂಸ್ಥೆಗಳು ಸ್ಥಾಪಿಸಲ್ಪಟ್ಟಿದ್ದವು. ಅವುಗಳ ಯಶಸ್ಸು ಅದನ್ನೇ ಅವಲಂಬಿಸಿತ್ತು. ಆದರೆ ಅಂತಹ ಸಂಸ್ಥೆಗಳು ಪ್ರತ್ಯೇಕವಾಗಿ, ಸಮಾನಾಂತರ ಸಂಸ್ಥೆಗಳ ಹಾಗೆ ಕಾರ್ಯನಿರ್ವಹಿಸುವುದನ್ನು ಕಾಣುತ್ತೇವೆ ಅಥವಾ ಅವು ಪರಸ್ಪರ ತಿಕ್ಕಾಟದಲ್ಲಿ ತೊಡಗಿವೆ.

ಮೇಲಿನ ಸಂದರ್ಭ ಅಥವಾ ಅರ್ಥದಲ್ಲಿ, ನಾವು ಶೈಕ್ಷಣಿಕಸಂಪನ್ಮೂಲ ತಂಡ (ARG-ಅಕಾಡೆಮಿಕ್ ರಿಸೌರ್ಸ್ ಗ್ರೂಪ್) ಎಂಬ ಒಂದು ಸಾಂಸ್ಥಿಕ ವ್ಯವಸ್ಥೆಯ ಪರಿಕಲ್ಪನೆಯನ್ನು ರೂಪಿಸಿದೆವು. ಸಂರಚನೆಯಲ್ಲಿ ಅದು ಔಪಚಾರಿಕವಾಗಿದ್ದರೂ ಅದರ ಪ್ರಕ್ರಿಯೆಗಳು ಅನೌಪಚಾರಿಕವಾಗಿದ್ದವು. ಪರಸ್ಪರ ಗೌರವದ ವಾತಾವರಣದಲ್ಲಿ ಸಂವಹನ ಮತ್ತು ಹೊಂದಿಕೆ (alignment) ಯು ಇರುವಂತೆ ನೋಡಿಕೊಳ್ಳುವುದಕ್ಕಾಗಿ ರೂಪಿಸಿದ ಈ ರಾಚನಿಕ ವಿಧಾನವು ಹೊರೆಯಾಗುವುದಕ್ಕಿಂತಲೂ ಹೆಚ್ಚಾಗಿ ವ್ಯವಸ್ಥೆಯ ಮೌಲ್ಯವನ್ನು ವರ್ಧಿಸುತ್ತದೆ. ಇದರ ಅಗತ್ಯವನ್ನು ಮನಗೊಂಡ ಸರ್ಕಾರವೂ ಉತ್ತರ ಕಾಶಿ ಮತ್ತು ಉದ್ಧಾಮ ಸಿಂಗ್ ನಗರ ಜಿಲ್ಲೆಗಳಲ್ಲಿ ARG ಗಳನ್ನು ರಚಿಸಲು ಅನುಮತಿ ನೀಡಿದ್ದಷ್ಟೇ ಅಲ್ಲ, ಅವುಗಳ ಕಾರ್ಯನಿರ್ವಹಣೆಗೆ ಬೇಕಾದ ಆರ್ಥಿಕ ನೆರವನ್ನೂ ಒದಗಿಸಿತು. ಹೀಗೆ, ಕೆಳಗಿನ ಗುರುತು ಹಾಗೂ ಧ್ಯೇಯೋದ್ದೇಶಗಳೊಂದಿಗೆ ARG ಗಳು ಅಸ್ತಿತ್ವಕ್ಕೆ ಬಂದವು.

- ಇದೊಂದು ಎಲ್ಲವನ್ನೂ ಒಳಗೊಳ್ಳುವ ವೇದಿಕೆ. ಇದರಲ್ಲಿ ಮೂಲಭೂತವಾಗಿ ಸರ್ಕಾರೇತರ ಸಂಘ ಸಂಸ್ಥೆಗಳು, PRI ಗಳು ಸೇರಿದಂತೆ, ಶಿಕ್ಷಕರಿಂದ ಹಿಡಿದು ಹಿರಿಯ ಶಿಕ್ಷಣಾಧಿಕಾರಿಗಳ ವರೆಗೆ ಎಲ್ಲಾ ಭಾಗೀದಾರರನ್ನು ಒಳಗೊಂಡ ರೀತಿಯಲ್ಲಿ ಪ್ರತಿನಿಧಿಗಳಿರುತ್ತಾರೆ.
- ಈ ವೇದಿಕೆಯು ಎಲ್ಲಾ ಭಾಗೀದಾರರಿಗೆ/ಸಂಸ್ಥೆಗಳಿಗೆ ಕೇವಲ ಪರಸ್ಪರರ ನಿರೀಕ್ಷೆಗಳನ್ನು ತಿಳಿದುಕೊಳ್ಳಲು ಅವಕಾಶವನ್ನು ಒದಗಿಸುವುದಷ್ಟೇ ಅಲ್ಲ, ಅವರ ಸಮಸ್ಯೆ ಹಾಗೂ ಅವರೆದುರಿಗಿರುವ ಸವಾಲುಗಳನ್ನು ಅರಿತುಕೊಳ್ಳುವುದಕ್ಕೂ ಸಹಾಯ ಮಾಡುತ್ತದೆ.
- ಇದು ಶೈಕ್ಷಣಿಕ ಸಾಧ್ಯಕಾರಕರ (academic enablers) ಪಾತ್ರವನ್ನು ನಿರ್ವಹಿಸುತ್ತಿರುವ ಎಲ್ಲಾ ಸಂಸ್ಥೆಗಳಿಗೂ ಸಮನ್ವಯ ಮತ್ತು ಹೊಂದಾಣಿಕೆಯಿಂದ ಕೆಲಸ ಮಾಡಲು ಅನುವಾಗುವಂತೆ ಸಾಮಾನ್ಯ ಸ್ಥಳಾವಕಾಶವನ್ನು ಒದಗಿಸುತ್ತದೆ.
- ಗುಣಮಟ್ಟ ಸುಧಾರಣೆಯ ವಿಷಯದಲ್ಲಿ ಕೈಗೊಂಡ 'ವಿಶೇಷ' ಪ್ರಯತ್ನಗಳನ್ನು 'ಇನ್ನುಳಿದ ಭಾಗೀದಾರ'ರೊಂದಿಗೆ ಹಂಚಿಕೊಳ್ಳಲು ಇದು ಅವಕಾಶವನ್ನು ಒದಗಿಸುತ್ತದೆ.
- ಶಿಕ್ಷಕರು ಹಾಗೂ ಶೈಕ್ಷಣಿಕ ಬೆಂಬಲ ಕಾರ್ಯನಿರ್ವಾಹಕರಿಗೆ (academic support functionaries) ಎದುರಾಗುವ ಸಮಸ್ಯೆ ಹಾಗೂ ಸವಾಲುಗಳನ್ನು ಇದು ಗುರುತಿಸುತ್ತದೆ ಮತ್ತು ಸಾಧ್ಯವಿರುವ ಪರಿಹಾರಗಳನ್ನು ಸೂಚಿಸುತ್ತದೆ.
- ನಿರ್ಣಯಗಳನ್ನು ತೆಗೆದುಕೊಳ್ಳುವ ಸಂಸ್ಕೃತಿಯನ್ನು' ವ್ಯಕ್ತಿಗತ'ದಿಂದ 'ಸಾಮೂಹಿಕ' ನೆಲೆಗೆ ಬದಲಾಯಿಸಲು ಪ್ರಯತ್ನಿಸುತ್ತದೆ.
- ಇದು ಸಂವಹನದ ಕೊರತೆಯನ್ನು 'ಸ್ಥಗಿತ'ಗೊಳಿಸುವುದಷ್ಟೇ ಅಲ್ಲ, ಅದನ್ನು 'ಹೆಚ್ಚಿಸುವ' ಗುರಿಯನ್ನೂಹೊಂದಿದೆ.
- ಒಂದು ವೇದಿಕೆಯಾಗಿ ಇದು ತನ್ನ ಆಚರಣೆಗಳ ಮೂಲಕ ಪ್ರಜಾತಂತ್ರಾತ್ಮಕ ಮೌಲ್ಯಗಳಿಗೆನಿ ಷ್ಠವಾಗಿರುತ್ತದೆ. ಉದಾಹರಣೆಗೆ, ಶಿಕ್ಷಕರಿರಲಿ, ಅಧಿಕಾರಿಗಳಿರಲಿ ಎಲ್ಲರೂ ಕೇವಲ ಸದಸ್ಯರಾಗಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುವುದು, ಯಾರಾದರೂ ಸುಗಮಕಾರರು (facilitator) ಆಗಬಹುದು. ಎಲ್ಲರಿಗೂ ಒಂದೇ ಗುಣಮಟ್ಟದ ಊಟ ಮತ್ತು ವಸತಿ ವ್ಯವಸ್ಥೆಯನ್ನು ಮಾಡುವುದು ಇತ್ಯಾದಿ.
- ತಮ್ಮ ವಾರ್ಷಿಕ ಶೈಕ್ಷಣಿಕ ಯೋಜನೆಗಳನ್ನು ರೂಪಿಸಲು ಮತ್ತು ಪರಾಮರ್ಶಿಸಲು DIET, DPO/DEO ಗಳಿಗೆ ಇದುಬೆಂಬಲವನ್ನು ನೀಡಬಯಸುತ್ತದೆ.

ಒಂದೊಮ್ಮೆ ARG ಯ ಪರಿಕಲ್ಪನೆಯನ್ನು ಸಂಪೂರ್ಣವಾಗಿ ಒಳಗೊಂಡರೆ ಕೆಳಗಿನ ಸ್ವರೂಪದ ಸಾಂಸ್ಥಿಕ ಹೊಂದಿಕೆ (alignment)ಯು ಹೊರಹೊಮ್ಮಬಹುದು ಹಾಗೂ ನಾವು ಆ ದಿಸೆಯಲ್ಲಿ ಕೆಲ ಹೆಜ್ಜೆಗಳನ್ನು ಇಟ್ಟಿದ್ದೇವೆ.




School- ಶಾಲೆ

DIET-District Institute of Education and Training- ಜಿಲ್ಲಾ ಶೈಕ್ಷಣಿಕ ಮತ್ತು ತರಬೇತಿ ಸಂಸ್ಥೆ

DPO-District project Officer ಜಿಲ್ಲಾ ಯೋಜನಾಧಿಕಾರಿ

DEO-District Education Officer ಜಿಲ್ಲಾ ಶಿಕ್ಷಣಾಧಿಕಾರಿ

SSA- Sarva Shiksha Abhiyaan ಸರ್ವ ಶಿಕ್ಷಣ ಅಭಿಯಾನ

BRC-Block Resource Centre ಕ್ಷೇತ್ರ(ಬ್ಲಾಕ್) ಸಂಪನ್ಮೂಲ ಕೇಂದ್ರ

CRC-Cluster Resource Centreಸಮೂಹ (ಕ್ಲಸ್ಟರ್) ಸಂಪನ್ಮೂಲ ಕೇಂದ್ರ

ಈ ಪಯಣದಲ್ಲಿ ತಲುಪಲಾದ ಕೆಲ ಮೈಲಿಗಲ್ಲುಗಳು ಹೀಗಿವೆ:
ಉತ್ತರ ಕಾಶಿ ಜಿಲ್ಲೆಯಲ್ಲಿ ARG ಗಳನ್ನು ರಚಿಸಿದ ಮೇಲೆ ತೆಗೆದು ಕೊಂಡ ಕೆಲವು ತೀರ್ಮಾನಗಳು ಹಾಗೂ ಉಪಕ್ರಮಗಳು ಕೂಡ ರಾಜ್ಯಾಡಳಿತಕ್ಕೆ ಮಾರ್ಗದರ್ಶನ ನೀಡಿವೆ ಉದಾಹರಣೆಗೆ:

- ARG ಗಳಲ್ಲಿ ನಡೆದ ಶೈಕ್ಷಣಿಕ ಚರ್ಚೆಗಳು ಬಾಲ ಶೋಧಮೇಳ (ಸ್ಟೂಡಂಟ್ ರಿಸರ್ಚರ್ಸ್ ಸೆಮಿನಾರ್) ಎಂಬ ನವೀನ ಪರಿಕಲ್ಪನೆಯ ಹುಟ್ಟಿಗೆ ಕಾರಣವಾದವು. ಅದನ್ನು ನಂತರ ಇಡೀ ರಾಜ್ಯವೇ ಅಳವಡಿಸಿಕೊಂಡಿತು.
- ಕ್ಷೇತ್ರ (ಬ್ಲಾಕ್) ಮಟ್ಟದಲ್ಲಿ ಶಿಕ್ಷಕರ ಅಸಮಾಧಾನ ನಿವಾರಣಾ ಶಿಬಿರಗಳ (Teachers' Grievance Redressal Camps) ಸ್ಥಾಪನೆಯು ಅಂತಹದೇ ಇನ್ನೊಂದು ಪರಿಕಲ್ಪನೆ. ಇದು ಶಿಕ್ಷಕರು ಎದುರಿಸುತ್ತಿದ್ದ ಆಡಳಿತಾತ್ಮಕ ಸ್ವರೂಪದ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸಿತು. ಇಂತಹ ಶಿಬಿರಗಳು ಶಿಕ್ಷಕರ

ನಡುವೆ ಬಹಳ ಜನಪ್ರಿಯವಾದವು. ತಮ್ಮ ಭೇಟಿಯ ಸಮಯದಲ್ಲಿ ಶಿಕ್ಷಕರಿಂದ ಅವರ ಕಾರ್ಯಸಾಧನೆಯ ಕುರಿತಾಗಿ ತುಸು ಬಲವಾಗಿಯೇ ಆಗ್ರಹಿಸಲು ಶೈಕ್ಷಣಿಕ ಬೆಂಬಲ ನಿರ್ವಾಹಕರಿಗೆ ಇದು ನೈತಿಕ ಹಕ್ಕನ್ನು ನೀಡಿತು.

- ಸಭೆಗಳಲ್ಲಿ ಸಮಸ್ಯೆ/ವಿಷಯಗಳನ್ನು ನಿರೂಪಿಸಿ, ಮಂಡಿಸಲು ಸಂಶೋಧನಾ ಆಧಾರಿತ ವಿಧಾನವನ್ನು ಬಳಸುವ ಸಂಸ್ಕೃತಿಗೆ ಉತ್ತೇಜನ ನೀಡಿತು.
- ಹಲವಾರು ಕ್ಷೇತ್ರ (ಬ್ಲಾಕ್) ಮತ್ತು ಸಮೂಹ (ಕ್ಲಸ್ಟರ್)ಮಟ್ಟದ ಸಭೆಗಳು ಶೈಕ್ಷಣಿಕ ಸ್ವರೂಪದ್ದಾದವು. ಅಷ್ಟೇ ಅಲ್ಲ, ಆ ದಿಸೆಯಲ್ಲಿ ಹೆಚ್ಚು ಹೆಚ್ಚು ಪ್ರಬುದ್ಧವೂ ಆಗುತ್ತಿವೆ.
- ಅನೇಕ ಶಿಕ್ಷಕರು ಮತ್ತು ಶೈಕ್ಷಣಿಕ ಬೆಂಬಲ ನಿರ್ವಾಹಕರು ತಮ್ಮ ಯಶಸ್ವೀ ಹಾಗೂ ಅರ್ಥಪೂರ್ಣ ಉಪಕ್ರಮಗಳಿಂದಾಗಿ ಗುರುತಿಸಲ್ಪಟ್ಟರು. ಅವರ ಕಾರ್ಯವು ಇನ್ನಿತರ ಅನೇಕರಿಗೆ ಇಂತಹುದೇ ಹೆಜ್ಜೆಗಳನ್ನಿಡಲು ಸ್ಫೂರ್ತಿ ನೀಡಿದವು.
- ARG ಸಭೆ, ಚರ್ಚೆಗಳಷ್ಟೇ ಇಂತಹ ಪ್ರಯತ್ನಗಳಿಗೆ ಕಾರಣವಾದವು ಅಂತ ಅಲ್ಲ. ARG ಸದಸ್ಯರಿಗಾಗಿ ಕೆಳಗೆ ಉಲ್ಲೇಖಿಸಿದ ಸಾಮರ್ಥ್ಯ ನಿರ್ಮಾಣ ಕಾರ್ಯಾಗಾರಗಳು ಹಾಗೂ ಅನುಭವ ಪ್ರವಾಸಗಳನ್ನು ಕೂಡ ಆಯೋಜಿಸಲಾಗಿತ್ತು.

  - ದಿಗಂತರದಿಂದ ರಾಜಾಸ್ತಾನದ ಜೈಪುರದಲ್ಲಿ ಶಿಕ್ಷಣದನೋಟ (ದೃಷ್ಟಿಕೋನ, ಪರಿಪ್ರೇಕ್ಷ್ಯ-perspective) ಕುರಿತಾಗಿ 10 ದಿನದ ಸಾಮರ್ಥ್ಯ ನಿರ್ಮಾಣ ಕಾರ್ಯಾಗಾರ.

  - ವಿದ್ಯಾಭವನದಿಂದ ರಾಜಾಸ್ತಾನದ ಉದಯಪುರದಲ್ಲಿ ಶಿಕ್ಷಣದನೋಟ (ದೃಷ್ಟಿಕೋನ, ಪರಿಪ್ರೇಕ್ಷ್ಯ) ಕುರಿತಾಗಿ 10 ದಿನದ ಸಾಮರ್ಥ್ಯ ನಿರ್ಮಾಣ ಕಾರ್ಯಾಗಾರ.

  - ಏಕಲವ್ಯದಿಂದ ಮಧ್ಯಪ್ರದೇಶದ ಹೋಶಂಗಾಬಾದ್‌ನಲ್ಲಿ ಶಿಕ್ಷಣದ ನೋಟ (ದೃಷ್ಟಿಕೋನ, ಪರಿಪ್ರೇಕ್ಷ್ಯ) ಕುರಿತಾಗಿ 10 ದಿನದ ಸಾಮರ್ಥ್ಯ ನಿರ್ಮಾಣ ಕಾರ್ಯಾಗಾರ.

  -ಆಜೀಮ್ ಪ್ರೇಮ್‌ಜಿ ಫೌಂಡೇಷನ್ ಹಾಗೂ DPO (SSA) ನ ಸಹಯೋಗದಲ್ಲಿ ಉತ್ತರಕಾಶಿಯಲ್ಲಿ ಶಿಕ್ಷಣದ ನೋಟ (ದೃಷ್ಟಿಕೋನ, ಪರಿಪ್ರೇಕ್ಷ್ಯ) ಕುರಿತಾಗಿ 5 ದಿನದ ಸಾಮರ್ಥ್ಯ ನಿರ್ಮಾಣ ಕಾರ್ಯಾಗಾರ.

ಕೆಲವು ಪರಿವೀಕ್ಷಣೆಗಳು;

ಸಾಂಸ್ಥಿಕ (ಹೊಂದಿಕೆ (alignment)ಯನ್ನು ತರಲು ಈ ಉಪಕ್ರಮದ ಮಹತ್ವವು ಎಷ್ಟಿದೆ ಎಂಬುದನ್ನು ಈ ಪಯಣದ ಹಾದಿಯಲ್ಲಿ ನಾವು ಅರಿತುಕೊಂಡೆವು. ಜನರಲ್ಲಿ ಹಾಗೂ ಸಂಸ್ಥೆಗಳಲ್ಲಿ ಒಳ್ಳೆಯ ನಡತೆಯ ಮತ್ತು ಸಂಸ್ಕೃತಿಯ ಬೀಜವನ್ನು ಬಿತ್ತಲಾಯಿತು. ಸಂವಾದವೊಂದು ಗೌರವಪೂರ್ಣವಾಗಿ, ಸಮಾನರ ನಡುವೆ ನಡೆದಂತೆ ನಡೆದರೆ ಅದು ಸದಾ ರಚನಾತ್ಮಕವಾಗಿರುತ್ತದೆ ಹಾಗೂ ದೀರ್ಘಕಾಲೀನ ಪ್ರಭಾವಗಳನ್ನು ಹೊಂದಿರುವ ಪರಿಣಾಮಕಾರೀ ನಿರ್ಣಯಗಳಿಗೆ ಕಾರಣವಾಗುತ್ತದೆ ಎನ್ನುವುದನ್ನು ನಾವು ಕಂಡುಕೊಂಡೆವು. ಇಂತಹ ಸಂವಾದವನ್ನು ಏರ್ಪಡಿಸಲು ಅಗತ್ಯವಾದ ವಾತಾವರಣವನ್ನು ನಿರ್ಮಾಣ ಮಾಡುವ ಹೊಣೆಯು ನಾಯಕತ್ವದ ಸ್ಥಾನದಲ್ಲಿರುವವರ ಮೇಲಿದೆ. ಬಹುಮಟ್ಟಿಗೆ, ನಾಯಕತ್ವದ ಸ್ಥಾನದಲ್ಲಿರುವವರ ದೃಷ್ಟಿಕೋನವು ಈ ಉಪಕ್ರಮದ ಯಶಸ್ಸನ್ನು ನಿರ್ಧರಿಸುತ್ತದೆ,

ARG ಯು ಕಳೆದ 5-6 ವರ್ಷಗಳಿಂದ ಕೇವಲ ಉತ್ತರಕಾಶಿ ಹಾಗೂ ಉದ್ದಾಮ ಸಿಂಗ್‌ನಗರ ಜಿಲ್ಲೆಗಳಲ್ಲಿ ಮಾತ್ರ ಕಾರ್ಯಾಚರಣೆಯಲ್ಲಿದೆ. ಜಿಲ್ಲೆಯ ಶೈಕ್ಷಣಿಕ ಮುಂದಾಳತ್ವದಲ್ಲಿ ಪದೇಪದೇ ಆಗುತ್ತಿದ್ದ ವರ್ಗಾವಣೆಗಳಿಂದಾಗಿ ನಮಗೆ ಈ ವೇದಿಕೆಯ

ಸಭೆಗಳನ್ನು ನಿಯಮಿತವಾಗಿ ನಡೆಸಲು ಸಾಧ್ಯವಾಗಲಿಲ್ಲ. ಆದರೂ ಈ ಅಲ್ಪಾವಧಿಯಲ್ಲಿಯೇ ಮಾಡಲಾದ ಸಾಧನೆಗಳು ಈ ಕೆಳಗಿನ ನಮ್ಮ ನಂಬಿಕೆಯನ್ನು ಬಲಗೊಳಿಸಿವೆ-

ವಿವಿಧ ತರಹದ ಶಿಕ್ಷಣ ಕಾರ್ಯನಿರ್ವಾಹಕರಿಂದ ಕೂಡಿರುವ ಈ ವಿಶಾಲವಾದ ಶಿಕ್ಷಣ ವ್ಯವಸ್ಥೆಯಲ್ಲಿ, ವಿಶೇಷವಾಗಿ ಶಿಕ್ಷಕರು 'ಪ್ರತ್ಯೇಕಿತ' ಭಾವನೆಯನ್ನು ಅನುಭವಿಸುತ್ತಾರೆ. ಸಾಮೂಹಿಕ, ಸಂಯೋಜಿತ ಪ್ರಯತ್ನಗಳು ಹಾಗೂ ಒಂದು ನಿರಂತರವಾದ 'ಸಂವಾದ'ವು ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರೆಲ್ಲರಿಗೂ ಅತ್ಯಗತ್ಯವಾಗಿದೆ. ಈ ಸಂವಾದ ಹಾಗೂ ಪರಸ್ಪರ ಹೊಂದಿಕೆ(alignment)ಗಳು ಶೈಕ್ಷಣಿಕ ಕಾರ್ಯನಿರ್ವಾಹಕರ ವೃತ್ತಿ ಸಂಬಂಧೀ ಪ್ರತ್ಯೇಕತೆಯನ್ನು ಹೋಗಲಾಡಿಸುತ್ತವೆ. ಆ ಮೂಲಕ ಪರಸ್ಪರರನ್ನು ಬೆಂಬಲಿಸಲು ಹಾಗೂ ಪೂರಕ ಪಾತ್ರಗಳನ್ನು ನಿರ್ವಹಿಸಲು ವ್ಯಕ್ತಿಗಳು ಹಾಗೂ ಸಂಸ್ಥೆಗಳಿಗೆ ನೆರವಾಗುತ್ತವೆ. ಪ್ರಯಾಣವು ಸುದೀರ್ಘವಾಗಿದ್ದರೂ ನಾವು ಇನ್ನೂ ಮೊದಲನೆಯ ಹಂತದಲ್ಲಿದ್ದೇವಾದರೂ ಉತ್ತರಾಖಂಡ್ ನಲ್ಲಿ ಕೈಗೊಂಡ ARG ಪ್ರಯೋಗವು ಒಂದು ಆರೋಗ್ಯಪೂರ್ಣ ಆರಂಭವನ್ನು ನೀಡುತ್ತದೆ. 'ಸಂವಹನ ಹಾಗೂ ಹೊಂದಿಕೆ (alignment)ಗಳು ಗುರಿಯಲ್ಲ, ಬದಲಿಗೆ ಅದೊಂದು ದಿಸೆ ಹಾಗೂ ARG ಯು ಆ ದಿಸೆಯಲ್ಲಿ ಮುನ್ನಡೆಯುತ್ತಿದೆ,' ಎಂಬುದನ್ನು ನಾವು ನೋಡುತ್ತಿದ್ದೇವೆ.